(SMT. BASAVARAJESWARI)

(*b*) About 8 years.

(*c*) Since the tank bund, etc., are in a very bad condition, the said tank has to be fully restored and as such survey was conducted and estimate prepared. After consideration it was found that it is too costly and hence it could not be taken up.

(*d*) The matter will be considered.

ಶ್ರೀ ಗಂಗಾಬೋವಿ.—ಎಲ್ಲೆಲ್ಲಿ ಹತ್ತು ಎಕರೆ ಜಮೀನು ನೀರಾವರಿ ಆಗುತ್ತದೆಯೋ ಅಲ್ಲಿ ಒಂದು ಕೆರೆಯನ್ನು ಕಟ್ಟಬೇಕೆಂಬುದು ಸರ್ಕಾರದವರ ನೀತಿಯಾಗಿರುವಾಗ ಇಲ್ಲಿ 92 ಚಿಲ್ಲರೆ ಎಕರೆ ತರಿಯಾಗುವಂತಿದ್ದರೂ ಏಕೆ ಇನ್ನೂ ಕೆರೆಯನ್ನು ದುರಸ್ತಿ ಮಾಡಲಿಲ್ಲಾ ?

† ಶ್ರೀಮತಿ ಬನವರಾಜೇಶ್ವರಿ.—ಅದರ ಎಷ್ಟಿಮೇಟು ಈಗಾಗಲೇ ಆಗಿದೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಗಂಗಾಬೋವಿ.—ಹಾಗಾದರೆ ಅದನ್ನು ಇನ್ನೆಷ್ಟು ದಿನಗಳಲ್ಲಿ ಕೈಗೊಳ್ಳುತ್ತೀರಿ ?

ಶ್ರೀಮತಿ ಬನವರಾಜೇಶ್ವರಿ.—ಈ ಹಿಂದೆ ಆಗಲೇ ಒಂದಾವರ್ತಿ ತಾರೀಖು 2-2-1969ರಲ್ಲಿ ಆ ಸ್ಥಳವನ್ನು ಎಗ್ಜಿಕ್ಯುಟೀವ್ ಇಂಜನಿಯರ್ ವಿಜಿಟ್ ಮಾಡಿ ಅದರ ಬಗ್ಗೆ ಒಂದು ಎಷ್ಟಿಮೇಟನ್ನು ಒಂದು ಲಕ್ಷದ ನಾಲ್ಕು ಸಾವಿರಕ್ಕೆ ತಯಾರು ಮಾಡಿದ್ದರು. ಆದರೆ ಅದು ಬಹಳ ಜಾಸ್ತಿಯಾಯಿತು, ಎಕರೆ ಹಿಂದಕ್ಕೆ 1,118 ರೂಪಾಯಿಗಳ ಖರ್ಚು ಬೀಳುತ್ತದೆ. ಅಷ್ಟು ಬಿದ್ದರೆ ರಾಭದಾಯಕ ಆಗುವುದಿಲ್ಲ ಎಂದು ಅದನ್ನು ಮತ್ತೆ ಎಕರೆಗೆ ಒಂದು ಸಾವಿರಕ್ಕಿಂತ ಜಾಸ್ತಿಯಾಗದಂತೆ ಒಂದು ಅಂದಾಜನ್ನು ತಯಾರಿಸುವಂತೆ ಎಗ್ಜಿಕ್ಯುಟೀವ್ ಇಂಜಿನಿಯರಿಗೆ ತಿಳಿಸಲಾಗಿತ್ತು. ಅವರು ಅದನ್ನು ಈಗಾಗಲೇ ತಯಾರಿಸಿ ಸ್ಕೂಟಿನಿಗಾಗಿ ಸೂಪರಿನ್‌ಟೆಂಡೆಂಟ್‌ರಿಗೆ ಕಳುಹಿಸಿದ್ದಾರೆ. ಅದು ಬಂದ ಕೂಡಲೇ ಕೆಲಸ ಕೈಗೊಳ್ಳುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಅಲ್ಲಿ ಕೆರೆ ಒಡೆದು 8 ವರ್ಷಗಳ ಮೇಲಾಗಿದೆ. ಆದರೆ ಅಲ್ಲಿ ರೈತರಿಂದ ತರೀ ಕಂದಾಯವನ್ನು ವಸೂಲ್ಮಾಡಿದ್ದರೆ ಅದನ್ನು ಕ್ಯಾನ್ಸಲ್ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀಮತಿ ಬನವರಾಜೇಶ್ವರಿ.—ಅದನ್ನು ಪರಿಶೀಲಿಸಲಾಗುತ್ತದೆ. ಈ ವಿಚಾರ ಗೊತ್ತಿರಲಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸರ್ಕಾರದವರ ಧೋರಣೆಯ ಪ್ರಕಾರ ಕೆಲಸಗಳು ಬಹಳ ನಿಧಾನವಾಗುತ್ತಿರುವುದರಿಂದ ಹೀಗೆ ಅಂದಾಜುಗಳನ್ನು ರಿವೈಜ್ ಮಾಡಬೇಕಾಗಿದೆ ಖರ್ಚು ಜಾಸ್ತಿಯಾಗುತ್ತಿದೆ ಎಂಬುದು ಸರ್ಕಾರದವರಿಗೆ ಮನವರಿಕೆ ಆಗಿದೆಯೇ ?

ಶ್ರೀಮತಿ ಬನವರಾಜೇಶ್ವರಿ.—ಅದರ ಹಳೆಯ ವೇಸ್ಟ್‌ವೀಯರಿಗೆ ಅಲ್ಲಿ ಬರತಕ್ಕ ಫ್ಲಡ್ಡನ್ನು ತಡೆಯತಕ್ಕ ಶಕ್ತಿ ಇರಲಿಲ್ಲ. ಆದ್ದರಿಂದ ಅದನ್ನು ಈಗ ದೊಡ್ಡದನ್ನಾಗಿ ಮಾಡಬೇಕಾಗಿದೆ. ಅದೀಗ ಸರ್ಕಾರದವರ ಪರಿಶೀಲನೆಯಲ್ಲಿದೆ.

Committee constituted to recommend the release of cultivable forest lands in North Kanara District for Cultivation

114. Sri M. H. JAYAPRAKASH NARAYAN (Sirsi).—

Will the Minister of State for Forests be pleased to state :—

(*a*) whether it is a fact that they have issued a Government Order recently releasing an extent of one lakh acres of forest land in North Kanara District for cultivation ;

(*b*) whether this land would be distributed as per the land grant rules ;

(*c*) whether a Committee in this behalf has been constituted under the Chairmanship of the Deputy Commissioner ;

(*d*) if so, the powers and duties of that Committee ?

Sri ALUR HANUMANTHAPPA (Minister of State for Forests).—

(*a*) No.

(*b*) Does not arise.

(*c*) Yes.

(*d*) To recommend to Government for releasing cultivable Forest land for cultivation.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಿಂದಿನ ಬಡ್ಜೆಟ್ ಅಧಿವೇಶನದಲ್ಲಿ ಅರ್ಥ ಸಚಿವ ರಾಮಕೃಷ್ಣ ಹೆಗಡೆಯವರು ಒಂದು ಲಕ್ಷ ಎಕರೆ ಅರಣ್ಯ ಭೂಮಿಯನ್ನು ಜಾಗುವಳಿಗೆ ಬಿಟ್ಟು ಕೊಡುತ್ತೇವೆಂದು ಒಂದು ವಚನವನ್ನು ಕೊಟ್ಟಿರಲಿಲ್ಲವೇ ?

†ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದವರು ಇದರ ಬಗ್ಗೆ ಒಂದು ಹೈಲೆವರ್ ಕಮಿಟಿಯನ್ನು ಮಾಡಿ ಅದಕ್ಕೆ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಅದರ ಸದಸ್ಯರನ್ನಾಗಿ ಮಾಡಿ, ಅದು ಈಗಾಗಲೇ ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದೆ. ಆ ವರದಿ ಸರ್ಕಾರದವರ ಪರಿಶೀಲನೆಯಲ್ಲಿದೆ. ಆ ಪೈಕಿ 47 ಸಾವಿರ ಎಕರೆಗಳನ್ನು ರಿಲೀಜ್ ಮಾಡತಕ್ಕ ಬಗ್ಗೆ ಸದ್ಯದಲ್ಲೇ ಒಂದು ಆಜ್ಞೆ ಹೊರಬೀಳಲಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ ಒಂದು ಲಕ್ಷ ಎಕರೆ ಜಮೀನನ್ನು ಬಿಡುಗಡೆ ಮಾಡತಕ್ಕ ನೀತಿಯನ್ನು ಸರ್ಕಾರ ಒಪ್ಪಿ ಸಬ್ ಡಿವಿಷನ್ ಆಫೀಸರರ ಥೇರ್‌ಮನ್‌ಷಿಪ್‌ನಲ್ಲಿ ಒಂದು ಕಮಿಟಿ ಮಾಡಿದ್ದರು. ಆ ಕಮಿಟಿಯನ್ನು ರದ್ದು ಮಾಡಿ ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಒಂದು ಹೈಪವರ್ ಕಮಿಟಿ ಎಂದು ಮಾಡಿದ್ದಾರೆ. ಆ ಕಮಿಟಿಯವರು 45 ಸಾವಿರ ಎಕರೆಯನ್ನು ಬಿಡುಗಡೆಮಾಡಬೇಕೆಂದು ವರದಿ ಮಾಡಿದ್ದಾರೆ. ಉಳಿದ ಜಮೀನುಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ? ಈಗ ಬಡವರಿಗೆ ಹಾಗೂ ರೈತ ಕೂಲಿಗಾರರಿಗೆ ಅತಿಕ್ರಮಣವಾಗಿ ಮಾಡಿಕೊಂಡಿರುವ ಜಮೀನನ್ನು ಬಿಡುಗಡೆ ಪಟ್ಟಿಯಲ್ಲಿ ಸೇರಿಸಿ ಅವರಿಗೆ ಖಾಯಂ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—45 ಸಾವಿರ ಎಕರೆಯನ್ನು ಬಿಡುಗಡೆ ಮಾಡಬೇಕೆಂದು ಹೈಪವರ್ ಕಮಿಟಿ ಮಾಡಿದ ಶಿಫಾರಸುಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆ ಬಗ್ಗೆ ಸರ್ಕಾರದ ಘೋಷಣೆ ಕಳುಹಿಸುತ್ತೇವೆ. ಮುಂದಿನ ಕಾರ್ಯಕ್ರಮ ; ಮರಗಳನ್ನು ತೆಗೆದು ಜಮೀನನ್ನು ಸರ್ವೇ ಮಾಡಿಸಿ ದರಖಾಸ್ತು ರೂಲ್ಸ್ ಪ್ರಕಾರ ಜಮೀನು ಉಳುಮೆ ಮಾಡುವವರಿಗೆ ಜಮೀನು ಕೊಡುವ ಕಾನೂನನ್ನು ಅನುಸರಿಸಿ, ಜಮೀನುಗಳನ್ನು ಏರೇ ಮಾಡುವುದು ಸಂಬಂಧಪಟ್ಟ ಅಧಿಕಾರಿಗಳಾಗಿರುವ ಜಿಲ್ಲಾಧಿಕಾರಿಗಳಿಗೆ ಸೇರಿದ್ದು.

ಶ್ರೀ ಎಂ. ಎಂ. ಜಾಲಿಸಟ್ಟಿ.—ಸ್ವಾತಂತ್ರ್ಯ ಬಂದನಂತರ 1955ನೇ ಇಸವಿಯಿಂದ ಇದುವರೆಗೂ ಜಮೀನು ಬಿಡುಗಡೆ ಮಾಡುತ್ತೇವೆಂದು ನೋಟಿಫೈ ಮಾಡಿದ್ದೀರಿ. ಇದುವರೆಗೂ ಎಷ್ಟು ಎಕರೆ ಬಿಡುಗಡೆ ಮಾಡಬೇಕೆಂದು ರೆವಿನ್ಯೂ ಇಲಾಖೆಗೆ ಸೂಚನೆ ಕೊಟ್ಟಿದ್ದೀರಿ ? ಇದಕ್ಕೆ ಎಷ್ಟು ಶತಮಾನಗಳು ಬೇಕು ? ಇಂತಿಷ್ಟು ಅವಧಿಯಲ್ಲಿ ಇಷ್ಟು ಜಮೀನು ಬಿಡುಗಡೆಮಾಡುತ್ತೇವೆಂದು ಈ ಸಭೆಯ ಮುಂದೆ ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಇದುವರೆಗೂ ಅರಣ್ಯ ಇಲಾಖೆಯಿಂದ 13,112 ಎಕರೆಗಳಷ್ಟು ಜಮೀನನ್ನು ರಿಲೀಜ್ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರದವರು ಹುಕುಂ ಸಹ ಕೊಟ್ಟಿದ್ದಾರೆ. 2,900 ಎಕರೆಗಳನ್ನು ಇಂಡಿವಿಜುಯಲ್ಸ್‌ಗಿ ರಿಲೀಜ್ ಮಾಡುತ್ತೇವೆಂದು ಹೇಳಿದ್ದಾರೆ. ರೆವಿನ್ಯೂ ಇಲಾಖೆಯವರು ದರಖಾಸ್ತ್ ರೂಲ್ಸ್ ಪ್ರಕಾರ ಏರೇವಾರಿ ಮಾಡುವ ಅಧಿಕಾರವನ್ನು ತೆಗೆದು ಕೊಂಡಿದ್ದಾರೆ.

ಶ್ರೀ ಎಂ. ಎಂ. ಜಾಲಿಸಟ್ಟಿ.—ಧಾರವಾಡ ಜಿಲ್ಲೆಯೊಳಗೆ ಈಗಾಗಲೇ ಕೋ-ಆಪರೇಟಿವ್ ಸೊಸೈಟಿ ಮಾತಿ ಕೆಲವು ಹರಿಜನರು ಭೂಮಿಯನ್ನು ಬೇಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಯಾವ ಸೊಸೈಟಿಯವರು ಎಂದು ಹೇಳಿ ಮತ್ತೊಂದು ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

Sri A. R. BADARINARAYAN.—What is the declared policy of the Government in regard to release of lands for cultivation ?

Sri ALUR HANUMANTHAPPA.—In North Kanara we have got nearly 82 per cent of forest. There is land hunger in North Kanara District and Government has felt after hearing lot of representations from the ryots and also in Conference that land should be released for landless people in North Kanara District. To some extent we can release in North Kanara District where there is excess forest area.

Sri J. P. SARWESH.—May I know whether such Committees are constituted in almost all the districts of the State and whether non-official members are taken on those Committees ?

Sri ALUR HANUMANTHAPPA.—No such committees are constituted elsewhere except in North Kanara District.

ಶ್ರೀ ಎಂ. ಎಂ. ಜಾಲಿಸಟ್ಟಿ.—13 ಸಾವಿರ ಎಕರೆ ಜಮೀನನ್ನು ರಿಲೀಜ್ ಮಾಡಬೇಕೆಂದು ನಿರ್ಣಯ ಮಾಡಿದ್ದೀರಿ. ಎಷ್ಟು ಸಾವಿರ ಎಕರೆ ಕೊಡಬೇಕೆಂದು ಅರಣ್ಯ ಇಲಾಖೆಗೆ ಸೂಚನೆ ಕೊಟ್ಟಿದ್ದೀರಿ ! ಪ್ರತ್ಯಕ್ಷವಾಗಿ ಕೊಟ್ಟದ್ದು ಎಷ್ಟು ಸಾವಿರ ಎಕರೆ ?

ಶ್ರೀ ಆಲೂರು ಹನುಮಂತಪ್ಪ.—ಈಗಾಲೇ 5,260 ಎಕರೆಯಷ್ಟು ಜಂಗಲ್ ಕ್ಲಿಯಾರ್‌ಮಾಡಿ ರೆವಿನ್ಯೂ ಇಲಾಖೆಗೆ ವಹಿಸಲಾಗಿದೆ. ಮಾನ್ಯ ಸದಸ್ಯರು ಕೇಳುವ ಪ್ರಕಾರ ಒಂದು ವರ್ಷದಲ್ಲಿ 10 ಸಾವಿರ ಎಕರೆಗಳಷ್ಟು ಮರಗಳನ್ನು ಕ್ಲಿಯರ್ ಮಾಡಿ ವ್ಯವಸಾಯಕ್ಕೆ ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಒಂದು ಲಕ್ಷ ಎಕರೆಯಷ್ಟು ಜಮೀನನ್ನು ಬಿಡುಗಡೆ ಮಾಡುವುದಕ್ಕೆ ನೀವು ಟರ್ಮ್ಸ್ ಅಂಡ್ ಕಂಡೀಷನ್ಸ್ ಹಾಕಿ ಹೈಪವರ್ ಕಮಿಟಿಗೆ ಕೊಟ್ಟಿದ್ದೀರಿ. ಅವರು ಒಂದು ಲಕ್ಷ ಎಕರೆಯಷ್ಟು ಜಮೀನನ್ನು ಬಿಡುಗಡೆ ಮಾಡುವುದಕ್ಕೆ ಏಕೆ ಪ್ರೊಪೋಸರ್ಸ್ ಹಾಕಿಲ್ಲ ! 45 ಸಾವಿರ ಎಕರೆಗಳಷ್ಟು ಮಾತ್ರ ರಿಲೀಜ್ ಮಾಡಬೇಕೆಂದು ಹೇಳಿರುವುದರಿಂದ, ಇನ್ನುಳಿದ ಜಮೀನನ್ನು ಬಿಡುಗಡೆ ಮಾಡುವುದಕ್ಕಾಗುವುದಿಲ್ಲವೆಂದು ಏನಾದರೂ ಸೂಚನೆ ಕೊಟ್ಟಿದ್ದಾರೆಯೇ ! ಇದೂ ಅಲ್ಲದೆ ನಿರ್ಗತಿಕರಾದ ಬಡ ರೈತರು ಲಕ್ಷೋಪಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಿಂದ ಅವರೆಲ್ಲರಿಗೂ ಜಮೀನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸ್ವಾಮಿ, ಹೈ ಪವರ್ ಕಮಿಟಿಯವರು ಒಂದು ಲಕ್ಷ ಎಕರೆಯ ಟಾರ್‌ಗೆಟ್ ಇಟ್ಟುಕೊಂಡು ವಿವರವಾಗಿ ಸ್ಥಳ ಪರೀಕ್ಷೆ ಮಾಡಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನುಗಳನ್ನು ಅವರು ಪಟ್ಟಿಮಾಡಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿಯೂ ಎಷ್ಟೆಷ್ಟು ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದೆ ಎಂಬುದನ್ನು ಅವರು ಶಿಫಾರಸ್ಸು ಮಾಡಿದ್ದಾರೆ. ಈಗ ಜಮೀನಿಗಾಗಿ ಎಷ್ಟು ಅರ್ಜಿಗಳು ಬಂದಿವೆ, ಎಷ್ಟು ಜಮೀನು ಬೇಕಾಗುತ್ತದೆ ಎಂಬುದನ್ನೂ ಕೂಡ ಹೈಪವರ್ ಕಮಿಟಿಯವರು ಶಿಫಾರಸ್ಸು ಮಾಡಿದ್ದಾರೆ.